ನೋಡುತ್ತಲೇ ಜರುಗಿದನು. ಸ್ವಲ್ಪ ಸಮಯದ ನಂತರ ತಡವರಿಸುತ್ತಲೇ, "ಆಂಡಾಳ್ ಮಾಲೆ... ಇಂದೂ..." ಎಂದು ಪ್ರಾರಂಭಿಸಿದರು.

"ಧರಿಸಿದ್ದೇನೆ ನೋಡಿ ಅಪ್ಪ" ಆಂಡಾಳ್ ಮುಗುಳ್ನಗು ಅಳಿಸದೆ ಹೇಳಿದಳು.

"ಅಯ್ಯೋ, ಮಗುವೇ, ಅರಿಯದೆ ಅಪರಾಧ ಮಾಡುತ್ತಿದ್ದೀಯಲ್ಲಾ" ಎಂದು ಗದ್ಗದ ದನಿಯಲ್ಲಿ ನೊಂದುಕೊಂಡರು.

"ಇದರಲ್ಲಿ ಯಾವ ಅಪರಾಧ ಬಂತು ತಂದೆ? ನನಗೆ ಅವರ ಆಜ್ಞೆ ಇರುವುದೇ ಹಾಗೆ, ಗೊತ್ತಾ?"

ಕಪಟವಿಲ್ಲದೆ ಅವಳ ದನಿಯನ್ನು ಕೇಳಿದಕೂಡಲೇ ಅವರ ಎದೆ ಸಿಡಿಯುವಂತಿತ್ತು. ನಾರಾಯಣ ಎಂದು ಗುನುಗುತ್ತಾ ಕ್ಷಣಹೊತ್ತು ಕಣ್ಣು ಮುಚ್ಚಿ ತೆಗೆದರು. ಪ್ರಾಕಾರವನ್ನು ದಾಟಿ ಗರ್ಭಗುಡಿಯ ಕಡೆಗೆ ನಡೆದವು ಅವರ ಕಾಲುಗಳು. ಪುಷ್ಪಯಕ್ಷಣ ಪ್ರತಿಮೆಯನ್ನು ದಾಟಿ ಒಳಗೆ ಹೋದರು. ದೊಡ್ಡ ಮಂಟಪದಲ್ಲಿ ಕಲ್ಲುಕಂಬಗಳಲ್ಲಿ ಸುಂದರವಾದ ಶಿಲ್ಪಗಳು. ಎಲ್ಲವೂ ಕೃಷ್ಣನ ಜೀವನ ಚಿತ್ರಗಳು. ಮಧ್ಯೆ ಮಧ್ಯೆ ನೃತ್ಯಗಾತಿಯರ ಶಿಲ್ಪಗಳು. ಯಾವುದೋ ಒಂದು ಕಂಬದಲ್ಲಿ ಕಂಡ ಶಿಲ್ಪ ಆಂಡಾಳಿನಂತೆ ಇತ್ತು.

ಗರ್ಭಗುಡಿಯೊಳಗಿದ್ದ ಪುರೋಹಿತರು ಬಂದು ಪೆರಿಯಾಳ್ವಾರಿನಿಂದ ಬುಟ್ಟಿಗಳನ್ನೂ ಆಂಡಾಳಿನಿಂದ ಮಾಲೆಯನ್ನೂ ತೆಗೆದುಕೊಂಡು ಹೋದರು. ಪೆರಿಯಾಳ್ವಾರ್ ಕಣ್ಣು ಮುಚ್ಚಿಕೊಂಡು ಮನಸ್ಸನ್ನು ಏಕಾಗ್ರಗೊಳಿಸಲು ಪ್ರಯತ್ನಿಸಿದರು. ಕೆಲವು ಕ್ಷಣ ಕಣ್ಣು ಮುಚ್ಚಿಕೊಂಡ ಸ್ಥಿತಿಯಲ್ಲೇ, "ಮಹಾ ತಪಸ್ವಿಯ ಕಡಲೊಳಗಿಳಿದು ಕಾಪಾಡಿದ ಶಕ್ತಿಯುಳ್ಳವನೇ..." ಎಂದು ಪ್ರಾರಂಭಿಸಿದರು. ಆ ದನಿ ಗಂಭೀರವಾಗಿ ಎಲ್ಲ ಕಡೆ ಹಬ್ಬಿ ತುಂಬಿತು. ಎಲ್ಲಿಂದಲೋ ಬಂದ ಗಾಳಿಗೆ ದೀಪಗಳು ನಡುಗಿ ತುಡಿದವು. ಘಂಟಾನಾದದಂತೆ ಅವರ ದನಿ ಮೆಲ್ಲಮೆಲ್ಲಗೆ ಹರಡಿತು. ಪದಗಳು ತಾಳ ಮೇಳವೂ ತಮ್ಮಷ್ಟಕ್ಕೆ ಬೆರೆತು ನದಿಯಂತೆ ಉಕ್ಕಿದವು. ಪ್ರತಿ ಪದವೂ ಸಂಗೀತದೊಂದಿಗೆ ಕೂಡಿ ಬಂದಿತು. ಎಲ್ಲ ಕಡೆಗಳಿಂದ ಸಂಗೀತದ ತುಣುಕುಗಳು ತೆವಳಿ ಬಂದು ಬೆರೆದವು. ಕಣ್ಣಿಗೆ ಕಾಣದೆ ಹೊರಗೆ ಸಂಗೀತ ತುಂಬಿದ ಒಂದು ಬಯಲು ಎದ್ದು ನಿಲ್ಲುವಂತೆ ಕಂಡಿತು. ಹಾಡಿನ ಸಾಲುಗಳು ಮೊದಲು ಎದೆಯನ್ನು ನೇವರಿಸಿದವು, ನಂತರ ಉದರವನ್ನು ಮುಟ್ಟಿದವು. ಮೆಲ್ಲಗೆ ಮಂಟಪದಲ್ಲಿ ನೆರೆದಿದ್ದ ಪ್ರತಿಯೊಬ್ಬರನ್ನೂ ಮುಟ್ಟಿ ಒಂದು ಪದವಾಗಿ ಬದಲಾಯಿಸಿ ತೇಲಿ ಬಿಟ್ಟಿತು. ಬಹಳ ಸಮಯ ಸುರಿದ ಸಂಗೀತದ ಮಳೆಯಲ್ಲಿ ಅವರ ಮನಸ್ಸಿನ ವ್ಯಥೆ ಮರೆಯಾಯಿತು. ಅವರ ಎದೆಯ ಮೇಲೆ ಕಣ್ಣೀರು ಹರಿಯಿತು. ಗಂಟಲು ಗದ್ಗದಿಸಿತು. ನಿಧಾನವಾಗಿ ಅವರು ಎಚ್ಚೆತ್ತುಕೊಳ್ಳುತ್ತಿದ್ದರು.

ಅವರ ಕಣ್ಣು ತೆರೆಯುವುದನ್ನೇ ಕಾಯುತ್ತಿದ್ದ ಪುರೋಹಿತರು ಗರ್ಭಗುಡಿಯ ತೆರೆಯನ್ನು ಸರಿಸಿದರು. ತಕ್ಷಣ ಗಂಟೆ ತಾಳ ಮೇಳಗಳು ಮೊಳಗಿದವು. ಗರ್ಭಗುಡಿಯ ದೀಪಗಳು ಕಣ್ಣನ್ನು ಕೋರೈಸಿದವು. ಅರೆಕ್ಷಣ ಏನೂ ಅರ್ಥವಾಗಲಿಲ್ಲ. ಪೆರಿಯಾಳ್ವಾರ್ ದಿಟ್ಟಿಸಿ ನೋಡಿದರು. ಶ್ರೀರಂಗನ ರೂಪ ಪೂರ್ಣಾಲಂಕಾರ ಆಕಾರ. ಪಕ್ಕದಲ್ಲಿ ರಂಗನಾಯಕಿ. ಶಿಲ್ಪಗಳು ನಲುಗದೆ ಉರಿಯುವ ಎರಡು ಸೊಡರುಗಳಂತೆ ಇದ್ದವು. ಪೆರಿಯಾಳ್ವಾರ್ ಆಂಡಾಳ್ ಕಡೆ ತಿರುಗಿದರು. ಅವಳಿಗೆ ಅವಳ ಸ್ಥಿತಿಯನ್ನು ಅರ್ಥಮಾಡಿಸಲು ಇದೇ ತಕ್ಕ ಸಮಯ ಎಂದು ಅವರಿಗೆ ತೋರಿತು. ಆದರೆ, ಅವಳು ಈ ಜಗತ್ತಿನಲ್ಲೇ ಇಲ್ಲ. ಕಣ್ಣು ಮುಚ್ಚಿದ್ದವು. ತುಟಿ ಏನನ್ನೋ ಗುಣಗುಣಿಸುತ್ತಿತ್ತು. ಮುಖದಲ್ಲಿ ಮುದ್ದಾಡುವ ಭಾವ.

"ಆಂಡಾಳ್" ಉತ್ತರವಿಲ್ಲ. "ಆಂಡಾಳ್" ಮತ್ತೆ ಕರೆದಾಗ ಅವಳ ಕಣ್ಣುಗಳು ತೆರೆದವು. ಅವಳ ಮುಖದಲ್ಲಿ ಹರ್ಷದ ರೇಖೆ ಕೊರತೆಯಿಲ್ಲದೆ ತುಂಬಿತ್ತು.

"ಆಂಡಾಳ್ ಗರ್ಭಗುಡಿಯಲ್ಲಿ ಶ್ರೀರಂಗನನ್ನು ನೋಡಿದೆಯಾ? ಇಂದು ಪೂರ್ಣಾಲಂಕಾರ."

"ಹೌದು, ಅಪ್ಪ. ನನ್ನ ದೇಹವೂ ಮನಸ್ಸು ಪುಳಕಗೊಂಡಿದೆ. ನೋಡುತ್ತಲೇ ಇರಬೇಕು ಎನಿಸುತ್ತದೆ."

"ಅಲ್ಲಿ ಪಕ್ಕದಲ್ಲಿ ಯಾರಿದ್ದಾರೆ ಗೊತ್ತಾ ಆಂಡಾಳ್?"

"ಕಾಣಿಸುತ್ತಿದೆ ಅಪ್ಪ."

"ನಾನೇ ಅಪ್ಪ."

ಪೆರಿಯಾಳ್ವಾರ್ ಒಂದು ಕ್ಷಣ ಕಂಪಿಸಿದರು. "ಆಂಡಾಳ್ ಏನು ಒದರುತ್ತಿದ್ದೀಯ?" ಎಂದರು. ದೈವ